# ಸ್ಪಿನ್ನಿಗನ ಆತ್ಮಕಥೆ



ಜಗತ್ತು ಕಂಡ ಅತ್ಯುತ್ತಮ ಸ್ಪಿನ್ ಮಾಂತ್ರಿಕ ಆಸ್ಟ್ರೇಲಿಯಾದ ಶೇನ್ ವಾರ್ನ್, ಲೇಖಕ ಮಾರ್ಕ್ ನಿಕೊಲಾಸ್ ಜತೆಗೂಡಿ ಬರೆದ ತಮ್ಮ ಆತ್ಮಚರಿತ್ರೆಯನ್ನು ಕಳೆದ ತಿಂಗಳು ಬಿಡುಗಡೆ ಮಾಡಿದ್ದಾರೆ. ಆ ಪುಸ್ತಕದ ಹೆಸರು 'ನೋ ಸ್ಪಿನ್.' ಕ್ರಿಕೆಟ್ ಮೈದಾನದಲ್ಲಿ ತನ್ನ ಸ್ಪಿನ್ ಬೌಲಿಂಗ್ ಮೂಲಕ ಎದುರಾಳಿ ಆಟಗಾರರನ್ನು ದಿಕ್ಕಾಪಾಲು ಮಾಡುತ್ತಿದ್ದ ಶೇನ್ ವಾರ್ನ್, ತಮ್ಮ ಪುಸ್ತಕಕ್ಕೆ 'ನೋ ಸ್ಪಿನ್' ಎಂದು ಹೆಸರಿಟ್ಟಿದ್ದರೂ, ವೃತ್ತಿಜೀವನದ ಹಲವು ನಾಟಕೀಯ ತಿರುವುಗಳನ್ನು ಇಲ್ಲಿ ಬಯಲುಗೊಳಿಸಿದ್ದಾರೆ. ಮೈದಾನದ ಒಳಗೆ ಮತ್ತು ಹೊರಗೆ ಅವರ ಬದುಕಿನ ಹಲವು ಘಟನೆಗಳು ಇಲ್ಲಿ ಅನಾವರಣಗೊಂಡಿವೆ. ಅವುಗಳಲ್ಲಿ ಕೆಲವು ಬಹಳ ಕುತೂಹಲ ಹುಟ್ಟಿಸುವಂತಿವೆ. 'ತಂಡದ ನಾಯಕನಾಗಿ ಪಂದ್ಯ ಗೆಲ್ಲಬೇಕೆಂದರೆ, ನಾನು ಉಪಯೋಗಿಸುತ್ತಿದ್ದ ತಂತ್ರ ಪಾರ್ಟಿಯದ್ದು. ಪಂದ್ಯ ಗೆದ್ದರೆ ಪಾರ್ಟಿ ಕೊಡುತ್ತೇನೆಂದು ಸಹ ಆಟಗಾರರನ್ನು ಪುಸಲಾಯಿಸುವುದು ನನ್ನ ಸರಳ ಉಪಾಯವಾಗಿತ್ತು' ಎಂದು ಗುಟ್ಟೊಂದನ್ನು ರಟ್ಟು ಮಾಡಿದ್ದಾರೆ ವಾರ್ನ್. ವೃತ್ತಿಜೀವನದ ಕೀರ್ತಿ, ಪ್ರೇಮ ಪ್ರಕರಣಗಳು ಮತ್ತು ಕುಟುಂಬದ ಬಿಕ್ಕಟ್ಟುಗಳ ಬಗ್ಗೆಯೂ ವಾರ್ನ್ ಈ ಪುಸ್ತಕದಲ್ಲಿ ಹಲವು ಸಂಗತಿಗಳನ್ನು ದಾಖಲಿಸಿದ್ದಾರೆ.

ಬಹುಶಃ ಆಸ್ಟ್ರೇಲಿಯಾ ಮಾತ್ರವಲ್ಲ, ಜಗತ್ತಿನ ಕ್ರಿಕೆಟ್ ಆಡುವ ತಂಡಗಳಲ್ಲೇ ಹೆಚ್ಚು ವಿವಾದಗಳನ್ನು ಸೃಷ್ಟಿಸಿದ ಕೀರ್ತಿ ಶೇನ್ ವಾರ್ನ್‌ಗೆ ಸಲ್ಲುತ್ತದೆ. ವೃತ್ತಿಜೀವನದ ಉದ್ದಕ್ಕೂ ಸುದ್ದಿಯಲ್ಲಿದ್ದಾತ ಈತ. 1992ರಲ್ಲಿ ಮೊದಲ ಬಾರಿಗೆ ಟೆಸ್ಟ್ ಕ್ರಿಕೆಟ್ ತಂಡವನ್ನು ಪ್ರವೇಶಿಸಿದ ಈತ, 2013ರಲ್ಲಿ ಎಲ್ಲ ವಿಧದ ಕ್ರಿಕೆಟ್ ಪಂದ್ಯಗಳಿಗೆ ವಿದಾಯ ಹೇಳುವವರೆಗೆ, ಪ್ರದರ್ಶಿಸಿದ ಅತ್ಯದ್ಭುತ ಬೌಲಿಂಗ್ ಮತ್ತು ಮಾಡಿಕೊಂಡ ಉಪದ್ವ್ಯಾಪಗಳು ಈತನನ್ನು ಸದಾ ಮಾಧ್ಯಮಗಳ ಕಣ್ಮಣಿಯನ್ನಾಗಿಸಿದ್ದವು.

ಆಸ್ಟ್ರೇಲಿಯಾದ ಏಕದಿನ ಪಂದ್ಯಗಳ ತಂಡದ ನಾಯಕನಾದರೂ ವಾರ್ನ್ ಇಂಗ್ಲೆಂಡಿನಲ್ಲಿ ಹೆಚ್ಚು ಜನಪ್ರಿಯ. ಏಕೆಂದರೆ ಈತ ಕೌಂಟಿ ಪಂದ್ಯಗಳಲ್ಲಿ ಆಡುತ್ತಿದ್ದುದು ಇಂಗ್ಲೆಂಡಿನ ಹ್ಯಾಂಪ್‌ಶೈರ್ ಪರವಾಗಿ. ಭಾರತದ ವಿರುದ್ಧ ಪಂದ್ಯಗಳನ್ನು ಆಡುವಾಗಲೂ ಈತನನ್ನು ಮೆಚ್ಚಿಕೊಳ್ಳುವ ಲಕ್ಷಾಂತರ ಭಾರತೀಯರಿದ್ದರು. ಏಕೆಂದರೆ ಈತ ಐಪಿಎಲ್‌ನಲ್ಲಿ ರಾಜಸ್ತಾನ ರಾಯಲ್ಸ್ ನಾಯಕನಾಗಿದ್ದ. ಹಾಗೆಯೇ ದಕ್ಷಿಣ ಆಫ್ರಿಕಾದಲ್ಲೂ ಈತ ಸಾಕಷ್ಟು ಜನಪ್ರಿಯ ಆಟಗಾರ. ಅದಕ್ಕೆ ಇನ್ನೊಂದು ಮುಖ್ಯ ಕಾರಣ ಈತನ ಅತ್ಯದ್ಭುತ ಸ್ಪಿನ್ ಸಾಮರ್ಥ್ಯ. ಕ್ರೀಸಿನಲ್ಲಿ ನಿಂತ ಬ್ಯಾಟ್ಸ್‌ಮನ್ ಕಣ್ಣೆವೆ ಮುಚ್ಚಿ ತೆರೆಯುವುದರೊಳಗೆ ಚೆಂಡು ರಿವ್ವನೆ ತಿರುಗಿ ವಿಕೆಟ್ ಹಾರಿಸುತ್ತಿತ್ತು. ಅದಕ್ಕೆಂದೇ ಈತನನ್ನು ಮಾಂತ್ರಿಕ ಬೌಲರ್ ಎನ್ನುತ್ತಿದ್ದರು. ಆಸ್ಟ್ರೇಲಿಯಾಕ್ಕೆ ಅಸಾಧ್ಯವೆನ್ನಿಸಿದ ಹಲವು ಪಂದ್ಯಗಳನ್ನು ಏಕಾಂಗಿಯಾಗಿ ಗೆದ್ದುಕೊಟ್ಟ ಕೀರ್ತಿ ಈತನದ್ದು. 20ನೇ ಶತಮಾನದ ಐವರು ಅತ್ಯುತ್ತಮ ಕ್ರಿಕೆಟಿಗರ ಪೈಕಿ ಈತನೂ ಒಬ್ಬ ಎಂದು ವಿಸ್‌ಡಮ್ ಪ್ರಕಟಿಸಿರುವುದು ಈತನ ಕೀರ್ತಿಗೆ ಹಿಡಿದ ಕೈಗನ್ನಡಿ.

ಬೌಲಿಂಗ್ ಪ್ರತಿಭೆ ಈತನ ಕೀರ್ತಿ ಹೆಚ್ಚಿಸಿದಂತೆಯೇ ಹೆಣ್ಣುಬಾಕತನ ಈತನ ಅಪಕೀರ್ತಿಯನ್ನೂ ಹೆಚ್ಚಿಸಿತ್ತು. ಈತನಷ್ಟು ಸೆಕ್ಸ್ ಹಗರಣಗಳಲ್ಲಿ ಸುದ್ದಿ ಮಾಡಿದ ಇನ್ನೊಬ್ಬ ಕ್ರಿಕೆಟಿಗನಿಲ್ಲ ಎನ್ನಬಹುದು. ಪಾರ್ಟಿಪ್ರಿಯ ಶೇನ್‌ವಾರ್ನ್ ಒಂದು ಕೈಯಲ್ಲಿ ಬರ್ಗರ್ ಮತ್ತು ಇನ್ನೊಂದು ಕೈಯಲ್ಲಿ ಕೋಲ್ಡ್ ಬಿಯರ್ ಹಿಡಿದುಕೊಂಡು ಬಾರ್‌ನಲ್ಲಿ ಟೇಬಲ್ ಮೇಲೆ ನರ್ತಿಸುವ ಫೋಟೋಗಳು ಸಾಮಾನ್ಯ ಎನ್ನುವಂತಿದ್ದವು. ಅದಕ್ಕಿಂತ ಹೆಚ್ಚಾಗಿ ಅಶ್ಲೀಲ ಮೊಬೈಲ್ ಸಂದೇಶಗಳು ಈತನ ಅಪಕೀರ್ತಿಯನ್ನು ವಿಶ್ವದಾದ್ಯಂತ ಹರಡಿದವು. ಪ್ರತಿ ತಿಂಗಳೂ ಒಬ್ಬರಲ್ಲ ಇನ್ನೊಬ್ಬ ಮಾಡೆಲಿಂಗ್ ಬೆಡಗಿಯರು ಈತನ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಹೊರಿಸುತ್ತಿದ್ದರು. ಒಬ್ಬ ಹೆಣ್ಣಿನ ಜೊತೆಗೆ ಮಾತ್ರವಲ್ಲ, ಹಲವು ಹುಡುಗಿಯರ ಜತೆಗೆ ಏಕಕಾಲದಲ್ಲಿ ಬರಿಚಡ್ಡಿಯಲ್ಲಿ ಕಾಣಿಸಿಕೊಂಡ ಈತ ಈ ಕಾರಣಕ್ಕಾಗಿಯೇ ಹೆಂಡತಿಯನ್ನೂ ಕಳೆದುಕೊಂಡ. ಎಲಿಜಬೆತ್ ಹರ್ಲೀ ಜೊತೆಗೆ ರಹಸ್ಯ ಸರಸ, ಕೆರ್ರಿ ಕಾಲಿಮೋರ್ ಜತೆಗೆ ಬಿಎಂಡಬ್ಲ್ಯು ಕಾರಿನ ಬಾನೆಟ್ ಮೇಲೆ ಮಲಗಿ ಪ್ರೀತಿ ಮಾಡಿದ್ದು, ಇನ್ಯಾರೋ ಗೃಹಿಣಿಯರಿಗೆ ಅಶ್ಲೀಲ ಮೆಸೇಜ್‌ಗಳನ್ನು ಕಳಿಸಿದ್ದು ಹೀಗೆ ಪದೇ ಪದೇ ಸಿಕ್ಕಿಬೀಳುತ್ತಿದ್ದ ಈತನನ್ನು ಸಂಭಾಳಿಸಲಾಗದೆ ಕೈಹಿಡಿದ ಹೆಂಡತಿ ವಿಚ್ಛೇದನ ಪಡೆದುಕೊಂಡು ಹೊರಟು ಹೋದಳು.

ಕ್ರಿಕೆಟ್ ಮೈದಾನದಲ್ಲೂ ಈತನ ನಡವಳಿಕೆಗಳು ಕಳಂಕದಿಂದ ಹೊರತಾಗಿರಲಿಲ್ಲ. 1994ರಲ್ಲಿ ಶ್ರೀಲಂಕಾ ತಂಡದ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಬುಕ್ಕೀ ಒಬ್ಬನಿಗೆ ಪಂದ್ಯದ ಮಾಹಿತಿಗಳನ್ನು (ಸ್ಟೀವ್ ವಾ ಜತೆಗೂಡಿ) ಸೋರಿಕೆ ಮಾಡಿದ್ದಕ್ಕಾಗಿ ಈತನಿಗೆ ಭಾರೀ ದಂಡ ವಿಧಿಸಲಾಗಿತ್ತು. 2003ರಲ್ಲಿ ವಿಶ್ವಕಪ್ ಪಂದ್ಯಕ್ಕೆ ಮುಂಚೆ ತೂಕ ಇಳಿಸಿಕೊಳ್ಳಲೆಂದು ನಿಷೇಧಿತ ಔಷಧಿ ಸೇವಿಸಿದ ಆರೋಪದಲ್ಲಿ ಒಂದು ವರ್ಷದ ಮಟ್ಟಿಗೆ ಈತನನ್ನು ಟೆಸ್ಟ್ ಪಂದ್ಯಗಳಿಂದ ನಿಷೇಧಿಸಲಾಗಿತ್ತು. ದಕ್ಷಿಣ ಆಫ್ರಿಕಾದ ಮೂರು ಮಕ್ಕಳ ತಾಯಿ ಹೆಲೆನ್ ಎಂಬಾಕೆ ಈತ ತನಗೆ ಅಶ್ಲೀಲ ಸಂದೇಶ ಕಳಿಸಿ ಲೈಂಗಿಕ ಕಿರುಕುಳ ನೀಡುತ್ತಿದ್ದಾನೆಂದು ಆರೋಪ ಮಾಡಿದ್ದು ದೊಡ್ಡ ಸುದ್ದಿಯಾಗಿತ್ತು. ಈ ಕಿರುಕುಳವನ್ನು ಬಹಿರಂಗಪಡಿಸದಂತೆ ಈತ 2 ಲಕ್ಷ ಡಾಲರ್ ನೀಡುವುದಾಗಿ ವಾಗ್ದಾನ ಮಾಡಿದ್ದ, ಆದರೆ ಅದರಲ್ಲಿ ಅರ್ಧ ಹಣ ಮಾತ್ರ ನೀಡಿದ್ದ ಎಂದಾಕೆ ಮೊಕದ್ದಮೆ ಹೂಡಿದ್ದಳು. ಈ ಮೊಕದ್ದಮೆ ಆಕೆಯ ವಿರುದ್ಧವೇ ತಿರುಗಿ ಆಕೆಗೆ 18 ತಿಂಗಳ ಜೈಲು ಶಿಕ್ಷೆಯೂ ಆಗಿತ್ತು.

ಮುಂದಿನ ವರ್ಷ ಶೇನ್ ವಾರ್ನ್‌ಗೆ 50 ವರ್ಷ ತುಂಬುತ್ತದೆ. (ಬರ್ತ್‌ಡೇ 13 ಸೆಪ್ಟೆಂಬರ್ 1969) ಟೆಸ್ಟ್ ಮತ್ತು ಏಕದಿನ ಪಂದ್ಯಗಳಲ್ಲಿ ಈತ ಪಡೆದ ವಿಕೆಟ್‌ಗಳ ಸಂಖ್ಯೆ ಒಂದು ಸಾವಿರ ದಾಟಿದೆ. ಬಾಲಂಗೋಚಿಯಾಗಿ ಬ್ಯಾಟಿಂಗ್‌ಗೆ ಬರುತ್ತಿದ್ದ ಈತ ಒಟ್ಟು 3000 ಟೆಸ್ಟ್ ರನ್‌ಗಳನ್ನೂ ಹೊಡೆದಿದ್ದಾನೆ. 2008ರಲ್ಲಿ ಈತ ನಾಯಕನಾಗಿದ್ದಾಗ ರಾಜಸ್ತಾನ ರಾಯಲ್ಸ್ ಐಪಿಎಲ್ ಚಾಂಪಿಯನ್ ಆಗಿತ್ತು. ನಿವೃತ್ತಿಯ ಬಳಿಕ ಈಗ ಈತ ಸ್ಕೈ ಸ್ಪೋರ್ಟ್ಸ್‌ನಲ್ಲಿ ಕಾಮೆಂಟೇಟರ್ ಆಗಿ ಕೆಲಸ ಮಾಡುತ್ತಿದ್ದಾನೆ. ಈತನ ಈ ವರ್ಣರಂಜಿತ ಬದುಕೇ ಆತ್ಮಕಥನದ ಬಂಡವಾಳ. ಹಾಗೆಂದೇ ಅಭಿಮಾನಿಗಳು ಪುಸ್ತಕವನ್ನು ಮುಗಿಬಿದ್ದು ಖರೀದಿಸುತ್ತಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65